ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

41ನೇ ವರ್ಷದಲ್ಲಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಡೋಪಿಂಗ್ ಟೆಸ್ಟ್‌ನಲ್ಲಿ ಸಿಕ್ಕಿ ಬಿದ್ದ ಯೂಸುಫ್ ಪಠಾಣ್ : 5 ತಿಂಗಳ ನಿಷೇಧ

ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ಯೂಸುಫ್ ಪಠಾಣ್ ಡೋಪಿಂಗ್ ಟೆಸ್ಟ್‌ನಲ್ಲಿ ಸಿಕ್ಕಿ ಬಿದ್ದಿದ್ದು, ಪಠಾಣ್‌ಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ 5 ತಿಂಗಳ ನಿಷೇಧ ಹೇರಿದೆ. ಪಠಾಣ್ ಅವರ ರಕ್ತ ಮತ್ತು ಮೂತ್ರದ ಮಾದರಿಯನ್ನು ವೈದ್ಯರು ಪರೀಕ್ಷೆಗೆ ಒಳಪಡಿಸಿದ್ದರು. ಅದರಂತೆ ಇದೀಗ ಅವರ ವೈದ್ಯಕೀಯ ವರದಿ ಲಭ್ಯವಾಗಿದ್ದು , ಯೂಸುಫ್ ಪಠಾಣ್ ದೇಹದಲ್ಲಿ ನಿಷೇಧಿತ ಮಾದಕ ವಸ್ತುವಿನ ಅಂಶ ಕಂಡು ಬಂದಿದೆ ಎಂದು ವೈದ್ಯರು ವರದಿಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ಪರ ಪಾಂಚಜನ್ಯ ಮೊಳಗಿಸಲು ಕೃಷ್ಣ ರೆಡಿ

ಬಿಜೆಪಿ ಸೇರಿದ ಮೇಲೆ ಪಕ್ಷದ ಚಟುವಟಿಕೆಯಿಂದ ದೂರ ಉಳಿದಿದ್ದ ಕೇಂದ್ರದ ಮಾಜಿ ಸಚಿವ ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ಎಸ್.ಎಂ.ಕೃಷ್ಣ ಸಕ್ರಿಯರಾಗಲು ತೀರ್ಮಾನಿಸಿದ್ದಾರೆ. ಇದೇ 19ರಂದು ಮಂಡ್ಯದಲ್ಲಿ ನಡೆಯಲಿರುವ ಬಿಜೆಪಿ ಪರಿವರ್ತನಾ ರ್‍ಯಾಲಿ ಹಾಗೂ 28ರಂದು ಬೆಂಗಳೂರಿನಲ್ಲಿ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ಅವರೊಂದಿಗೆ ವೇದಿಕೆ ಹಂಚಿಕೊಳ್ಳಲಿದ್ದಾರೆ.

ಓಲ್ಡ್ ಮಾಂಕ್ ರಮ್ ರೂವಾರಿ ಕಪಿಲ್ ಮೋಹನ್ ಇನ್ನಿಲ್ಲ

ರಮ್ ಪ್ರಿಯರಿಗೆ ಓಲ್ಡ್ ಮಾಂಕ್ ರಮ್ ಪರಿಚಯಿಸಿದ್ದ ಕಪಿಲ್ ಮೋಹನ್(88) ಹೃದಯಾಘಾತದಿಂದ ವಿಧಿವಶರಾಗಿದ್ದಾರೆ. ಮೋಹನ್ ಅವರು ಭಾರತದ ಮೊದಲ ಮದ್ಯ ತಯಾರಿಕಾ ಸ್ಥಳವಾದ ಮೆಕಿನ್‌ನ ಅಧ್ಯಕ್ಷ ಮತ್ತು ಕಾರ್ಯ ನಿರ್ವಾಹಕ ನಿರ್ದೇಶಕರಾಗಿದ್ದರು. ಘಾಜಿಯಾಬಾದ್‌ನಲ್ಲಿರುವ ನಿವಾಸದಲ್ಲಿ ಕಪಿಲ್ ಕೊನೆಯುಸಿರೆಳೆದಿದ್ದಾರೆ ಎಂದು ಕುಟುಂಬದ ಮೂಲಗಳು ಹೇಳಿವೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 41 ಸಂಚಿಕೆ :49 ಬುಧವಾರ ಜ.10, 2018 ದೂರವಾಣಿ : 268494 ಪುಟ-4 ರೂ.2-00 NO. HSN-761/ 2018-20

ಲೈಂಗಿಕ ಕಿರುಕುಳ : ಸಹ ಶಿಕ್ಷಕ ಅಮಾನತ್ತು

ಬೇಲೂರು : ಲೈಂಗಿಕ ಕಿರುಕುಳ ಆರೋಪದಡಿ ತಾಲ್ಲೂಕಿನ ಹೊಸ ಮನೆಹಳ್ಳಿ ಕಿರಿಯ ಪ್ರಾಥಮಿಕ ಶಾಲಾ ಸಹ ಶಿಕ್ಷಕ ಬಿ.ಬಿ.ರುದ್ರೇಗೌಡ ಎಂಬುವವರನ್ನು ಅಮಾನತ್ತುಗೊಳಿಸಲಾಗಿದೆ.

ತಾಲ್ಲೂಕಿನ ಕಸಬಾ ಹೋಬಳಿಯ ಹೊಸಮನೆಹಳ್ಳಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಬಿ.ಬಿ.ರುದ್ರೇಗೌಡ ಅವರು ಶಾಲೆಯಲ್ಲಿನ ಹೆಣ್ಣು ಮಕ್ಕಳೊಡನೆ ಅಸಭ್ಯವಾಗಿ ವರ್ತಿಸಿದ್ದಾರೆ ಹಾಗೂ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಪೋಷಕರು ಹಾಗೂ ಸಾರ್ವಜನಿಕರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದೂರು ನೀಡಿದ್ದರು. ಈ ದೂರಿನ ಮೇರೆಗೆ ತನಿಖೆ ನಡೆಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಹ ಶಿಕ್ಷಕ ರುದ್ರೇಗೌಡ ಅವರನ್ನು ಅಮಾನತ್ತುಗೊಳಿಸಿದ್ದಾರೆ.

ನಾಲ್ಕು ವಾರಗಳಲ್ಲಿ ಕಾವೇರಿ ತೀರ್ಪು

ಎರಡು ದಶಕಗಳ ಗೊಂದಲಕ್ಕೆ ಸುಪ್ರೀಂ ಕೋರ್ಟ್ ತೆರೆ

ನವದೆಹಲಿ : ಕರ್ನಾಟಕ ಮತ್ತು ತಮಿಳುನಾಡು ನಡುವಿನ ಕಾವೇರಿ ನದಿ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಒಂದು ತಿಂಗಳಲ್ಲಿ ಅಂತಿಮ ತೀರ್ಪು ಪ್ರಕಟಿಸುವ ಸೂಚನೆ ನೀಡಿದ್ದು, ಎರಡು ದಶಕಗಳಿಂದ ಸಾಕಷ್ಟು ಗೊಂದಲ ಸೃಷ್ಟಿಸಲಾಗಿದೆ ಎಂದು ಮಂಗಳವಾರ ಹೇಳಿದೆ.

ನಾಲ್ಕು ವಾರಗಳಲ್ಲಿ ಅಂತಿಮ ತೀರ್ಪು ಪ್ರಕಟಿಸಿದ ನಂತರ ಯಾವುದೇ ವೇದಿಕೆ ಕಾವೇರಿ ಜಲಾನಯನ ಪ್ರದೇಶಕ್ಕೆ ಸಂಬಂಧಿಸಿದ ವಿಷಯ ಪ್ರಸ್ತಾಪಿಸಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

2007ರಲ್ಲಿ ಕಾವೇರಿ ನ್ಯಾಯಾಧೀಕರಣದ ಐ-ತೀರ್ಪು ಪ್ರಶ್ನಿಸಿ ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳು ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಗಳ ಸುದೀರ್ಘ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ನೇತೃತ್ವದ ತ್ರಿಸದಸ್ಯ ಪೀಠ ತೀರ್ಪನ್ನು ಕಾಯ್ದಿರಿಸಿತ್ತು.

ಕಾವೇರಿ ವಿವಾದಕ್ಕೆ ಸಂಬಂಧಿಸಿದಂತೆ ಕಳೆದ ಎರಡು ದಶಕಗಳಲ್ಲಿ ಸಾಕಷ್ಟು ಗೊಂದಲಗಳನ್ನು ಸೃಷ್ಟಿಸಲಾಗಿದೆ. ಈ ಕುರಿತು ಅಂತಿಮ ತೀರ್ಪು ನೀಡಿದ ನಂತರ ಯಾವುದೇ ವೇದಿಕೆ ವಿಷಯವನ್ನು ಪ್ರಸ್ತಾಪಿಸಬಹುದು ಎಂದು ತ್ರಿಸದಸ್ಯ ಪೀಠ ಹೇಳಿದೆ.

ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಕಿರಣ್ ಮೊಜುಂದಾರ್ ನೇತೃತ್ವದ ನಾಗರಿಕರ ವೇದಿಕೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಹಾಕಿತ್ತು. ಈ ಅರ್ಜಿಯ ವಿಚಾರಣೆ ವೇಳೆ ಕಾವೇರಿ ನದಿ ನೀರು ಹಂಚಿಕೆ ಕುರಿತಂತೆ ಅಭಿಪ್ರಾಯ ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್, ತಿಂಗಳಲ್ಲಿ ತೀರ್ಪು ಪ್ರಕಟಿಸುವುದಾಗಿ ತಿಳಿಸಿದೆ.

‘ಪದವಿ ಹಂತ ಪ್ರಾಯೋಗಾತ್ಮಕವಾಗಿ ಬಳಸಿಕೊಳ್ಳಿ’

ಹಾಸನ : ಪ್ರಸ್ತುತ ಆಧುನಿಕ ವಿದ್ಯಮಾನದಲ್ಲಿ ಹಾರ್ಡ್‌ವೇರ್ ಯುಗದಿಂದ ಸಾಫ್ಟ್‌ವೇರ್ ಯುಗ ತಲುಪಿದ್ದೇವೆ ಎಂದು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಜಾನಕಿ ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿನ ಸಭಾಂಗಣದಲ್ಲಿ ಮಂಗಳವಾರ ನಡೆದ ಹಾಸನ ಜಿಲ್ಲೆಯ 28 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಪದವಿ ಹಂತದಲ್ಲಿ ಶಿಕ್ಷಣವನ್ನು ಪ್ರಾಯೋಗಾತ್ಮಕವಾಗಿ ಬಳಸಿಕೊಳ್ಳಬೇಕು. ಕೇವಲ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಷ್ಟೇ ಅವರ ಧ್ಯೇಯವಲ್ಲ, ಬದಲಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು. ಲ್ಯಾಪ್‌ಟಾಪ್, ಇಂಟರ್‌ನೆಟ್ ಅವಶ್ಯಕತೆ ಯಥೇಚ್ಚವಾಗಿದ್ದು, ವಿದ್ಯಾರ್ಥಿಗಳು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ಸ್ಪರ್ಧಾತ್ಮಕ ಯುಗವು ಪೈಪೋಟಿ ಯುಗವಾಗಿದ್ದು , ವಿದ್ಯಾರ್ಥಿಗಳು ಸ್ಪರ್ಧಿಸಲು ಸಿದ್ಧರಿದ್ದರೂ ಆರ್ಥಿಕತೆ ಅವರನ್ನು ಹಿಂದೆಳೆಯುತ್ತಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ತಮ್ಮ ಜ್ಞಾನ ಮಟ್ಟ ಇನ್ನಷ್ಟು ಹೆಚ್ಚಿಸಿಕೊಳ್ಳಲು ಹಾಗೂ ಪ್ರತಿಭೆಯನ್ನು ವೃದ್ಧಿಸಿಕೊಳ್ಳಲು ಸರ್ಕಾರದ ಸೌಲಭ್ಯವನ್ನು ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

(-4ನೇ ಪುಟಕ್ಕೆ)

15 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ

ಬೇಲೂರು: ತಾಲ್ಲೂಕಿನ ರಾಯಾಪುರ ಗ್ರಾಮದಲ್ಲಿ ಎಸ್.ಸಿ.ಪಿ.-ಟಿ.ಎಸ್.ಪಿ. ಯೋಜನೆಯಡಿ 15 ಲಕ್ಷ ರೂ.ಗಳ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಶಾಸಕ ವೈ.ಎನ್.ರುದ್ರೇಶಗೌಡ ಮಂಗಳವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ವೈ.ಎನ್.ರುದ್ರೇಶಗೌಡ, ಬೇಲೂರು ತಾಲ್ಲೂಕಿನ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜನಸಾಂದ್ರತೆಗೆ ಅನುಗುಣವಾಗಿ ಸರ್ಕಾರದಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 7.5 ಕೋಟಿ ರೂ. ಅನುದಾನ ಬಂದಿದೆ. ಈ ಹಣದಲ್ಲಿ ತಾಲ್ಲೂಕಿನ ವಿವಿಧ ಗ್ರಾಮಗಳ ರಸ್ತೆಗಳನ್ನು ಕಾಂಕ್ರೀಟ್ ರಸ್ತೆಗಳನ್ನಾಗಿ ಮಾಡಲಾಗುವುದು ಎಂದರು.

ಈ ಯೋಜನೆಯಡಿ ರಾಯಾಪುರ-ಬಾರೇಮನೆ ಗ್ರಾಮದ 240 ಮೀಟರ್ ರಸ್ತೆ ಅಭಿವೃದ್ಧಿಗೆ 15 ಲಕ್ಷ ರೂ. ವ್ಯಯಿಸಲಾಗುವುದು. ಈಗಾಗಲೇ ರಾಯಾಪುರ ಗ್ರಾಮಸ್ಥರು ತಿಳಿಸಿದಂತೆ, ಗ್ರಾಮವು ಯಗಚಿ ಜಲಾಶಯದ ಪಕ್ಕದಲ್ಲಿದ್ದರೂ ಕುಡಿಯಲು ನೀರು ಸರಿಯಾಗಿ ಸಿಗುತ್ತಿಲ್ಲ. ಗ್ರಾಮಸ್ಥರ ಬೇಡಿಕೆಯಂತೆ ರಾಯಾಪುರ ಗ್ರಾಮಕ್ಕೆ ಮಲ್ಟಿವಿಲೇಜ್ ಸ್ಕೀಂನಡಿ ಕುಡಿಯುವ ನೀರು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿ ನಿರ್ದೇಶಕ ಕೃಷ್ಣೇಗೌಡ ಮಾತನಾಡಿ, ಶಾಸಕರು ಈಗಾಗಲೇ ತಾಲ್ಲೂಕಿನ ಬಹುತೇಕ ಗ್ರಾಮಗಳ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದಾರೆ. ಸರ್ಕಾರದ ವಿವಿಧ ಯೋಜನೆಗಳಡಿ ಕೋಟ್ಯಾಂತರ ರೂ.ಗಳನ್ನು ಬೇಲೂರು ವಿಧಾನಸಭಾ ಕ್ಷೇತ್ರಕ್ಕೆ ತಂದು ಕಾಮಗಾರಿ ಮಾಡಿಸಿದ್ದಾರೆ. ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾಮಗಾರಿ ಮಾಡಿಸಲು ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿದ್ದಾರೆ ಎಂದರು.

(-4ನೇ ಪುಟಕ್ಕೆ)

ಪತಿ ಮೃತಪಟ್ಟ ವಾರದೊಳಗೆ ಪತ್ನಿ ಸಾವು

ಹಾಸನ : ಪತಿ ಮೃತಪಟ್ಟ ವಾರದೊಳಗೆ ಪತ್ನಿ ಕೂಡ ಸಾವನ್ನಪ್ಪಿದ ದುರಂತವೊಂದು ನಗರದ ವಿದ್ಯಾನಗರ ಬಡಾವಣೆಯಲ್ಲಿ ನಡೆದಿದೆ. ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಶಿಶು ಅಭಿವೃದ್ಧಿ ಅಧಿಕಾರಿ ಹಾಗೂ ವಿದ್ಯಾನಗರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಎಸ್.ಆರ್. ಚನ್ನಬೈರೇಗೌಡ (64) ಅವರು ಜ.4ರಂದು ಮೃತಪಟ್ಟಿದ್ದರು. ಆಶ್ಚರ್ಯವೆಂದರೆ ಅವರ ಪತ್ನಿ ನಾಗರತ್ನ (60) ಅವರು ಜ.9ರ ಬೆಳಿಗ್ಗೆ 8.30ರ ಹೊತ್ತಿನಲ್ಲಿ ವಿದ್ಯಾನಗರದಲ್ಲಿರುವ ತಮ್ಮ ನಿವಾಸದಲ್ಲಿ ಸಾವನ್ನಪ್ಪಿದರು. ಮೃತರ ಅಂತ್ಯಕ್ರಿಯೆ ಹೊಸನಗರದಲ್ಲಿ ಸಂಜೆ ನಡೆಯಿತು.

ದಂಪತಿಗಳ ಏಕೈಕ ಪುತ್ರ ಹೆಚ್.ಸಿ. ಗಿರೀಶ್ ಬೆಂಗಳೂರು ನಗರ ಅರಣ್ಯ ಉಪ ಸಂರಕ್ಷಣಾಧಿಕಾರಿಯಾಗಿದ್ದಾರೆ.

ವಾಟೆಹೊಳೆ ಜಲಾಶಯಕ್ಕೆ ನೀರು ಹರಿಸದಿದ್ದರೆ ಹೋರಾಟ ಬೆದರಿಕೆ

ಆಲೂರು : ತಾಲ್ಲೂಕಿನಲ್ಲಿರುವ ವಾಟೆಹೊಳೆ ಜಲಾಶಯಕ್ಕೆ ಎತ್ತಿನಹೊಳೆ ಯೋಜನೆಯಿಂದ ನೀರು ಹರಿಸದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ನಾಗರಿಕ ಹೋರಾಟ ಸಮಿತಿ ಅಧ್ಯಕ್ಷ ಕೆ.ಎಸ್.ಮಂಜೇಗೌಡ ಎಚ್ಚರಿಸಿದರು.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಟೆಹೊಳೆ ಜಲಾಶಯ ತಾಲ್ಲೂಕಿನಲ್ಲಿ ನಿರ್ಮಾಣವಾದಾಗಿನಿಂದ ಕೇವಲ 9 ಬಾರಿ ಮಾತ್ರ ಸಾಧಾರಣ ಪ್ರಮಾಣದಲ್ಲಿ ನೀರು ಸಂಗ್ರಹವಾಗಿದೆ. ಉಳಿದ ವರ್ಷಗಳಲ್ಲಿ ಜಲಾಶಯ ನೀರಿಲ್ಲದೆ ಬಣಗುಟ್ಟಿದೆ. ಜಲಾಶಯದ ಅಚ್ಚುಕಟ್ಟು ಪ್ರದೇಶ 18500 ಎಕರೆ ವಿಸ್ತೀರ್ಣ ಪ್ರದೇಶವನ್ನು ಹೊಂದಿದ್ದು, ಜಲಾಶಯ ಭರ್ತಿಯಾದ ಸಂದರ್ಭಗಳಲ್ಲಿ ವ್ಯವಸಾಯಕ್ಕಾಗಿ ಕೇವಲ 5500 ಎಕರೆ ವಿಸ್ತೀರ್ಣದ ಪ್ರದೇಶಕ್ಕೆ ನೀರನ್ನು ಒದಗಿಸಲಷ್ಟೇ ಸಾಧ್ಯವಾಗಿದೆ. ಉಳಿದ 13000 ಎಕರೆ ವಿಸ್ತೀರ್ಣ ಪ್ರದೇಶಕ್ಕೆ ಈವರೆಗೂ ನೀರನ್ನು ಒದಗಿಸಲು ಸಾಧ್ಯವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಟ್ಟಣಕ್ಕೆ ವಾಟೆಹೊಳೆ ಜಲಾಶಯ 14 ಕಿ.ಮೀ. ದೂರದಲ್ಲಿದ್ದರೂ ಸಹ ಕುಡಿಯುವ ನೀರು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ. ಈವರೆಗೂ ಪಟ್ಟಣಕ್ಕೆ ಯಗಚಿ ನದಿಯ ನೀರನ್ನು ಕುಡಿಯುವ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತಿತ್ತು. ಈಗ ಯಗಚಿ ನದಿಯೂ ಸಂಪೂರ್ಣ ಬತ್ತಿ ಹೋಗಿದ್ದು, ಪಟ್ಟಣದ ಜನತೆ ಕುಡಿಯುವ ನೀರಿಗಾಗಿ ಪರಿತಪಿಸುವಂತಾಗಿದೆ ಎಂದರು.

ವಾಟೆಹೊಳೆ ಜಲಾಶಯಕ್ಕೆ ಎತ್ತಿನ ಹೊಳೆ ಯೋಜನೆಯಿಂದ ನೀರನ್ನು ಹರಿಸಿದರೆ ಪಟ್ಟಣದ ಜನತೆಯ ಕುಡಿಯುವ ನೀರಿನ ಸಮಸ್ಯೆ ಶಾಶ್ವತವಾಗಿ ನೀಗುವ ಜೊತೆಗೆ 13000 ಎಕರೆ ಅಚ್ಚುಕಟ್ಟು ಪ್ರದೇಶದ ರೈತರಿಗೆ ಬೇಸಿಗೆ ಬೆಳೆ ಬೆಳೆಯಲು ಸಹಕಾರಿಯಾಗುತ್ತದೆ. ಈಗ ರೂಪಿಸಿರುವ ಎತ್ತಿನಹೊಳೆ ಯೋಜನೆಯಲ್ಲಿ ಜಲಾಶಯದಿಂದ 900 ಮೀಟರ್ ದೂರದಲ್ಲಿ ಹಾಗೂ 42 ಅಡಿ ಕೆಳಭಾಗದಲ್ಲಿ ಕಾಲುವೆ ಮೂಲಕ ನೀರು ಹರಿದು ಹೋಗುವಂತೆ ಮಾಡಲಾಗುತ್ತಿದೆ. ಇದರಿಂದ ತಾಲ್ಲೂಕಿನ ಜನತೆಗೆ ಅನ್ಯಾಯವಾಗುತ್ತದೆ. ಆದುದರಿಂದ ಜಲಾಶಯದ ಮೇಲ್ಭಾಗದಲ್ಲಿ 1 ಕಿ.ಮೀ. ಅಂತರದಲ್ಲಿ ಸಮುದ್ರವಳ್ಳಿ ಬಳಿಯಿಂದ ಕಾಲುವೆ ಮೂಲಕ ಜಲಾಶಯಕ್ಕೆ ನೀರನ್ನು ಹರಿಸಲು ಅವಕಾಶವಿದೆ. ಈ ಸಂಬಂಧ ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ಅವರು ನಮ್ಮ ಸಮಸ್ಯೆಯನ್ನು ಪರಿಹರಿಸಲು ಕ್ರಮ ಕೈಗೊಳ್ಳದಿದ್ದರೆ ಯಾವುದೇ ಕಾರಣಕ್ಕೂ ಎತ್ತಿನಹೊಳೆ ಯೋಜನೆಯ ಕಾಮಗಾರಿ ನಡೆಯಲು ಬಿಡುವುದಿಲ್ಲ ಎಂದು ಎಚ್ಚರಿಸಿದರು.

ಹಿಂದುಳಿದ ವರ್ಗಗಳ ಮುಖಂಡ ಬಿ.ಸಿ.ಶಂಕರಚಾರ್ ಮಾತನಾಡಿ, ಬೇಲೂರು ತಾಲ್ಲೂಕಿನ ಮಾದಿಹಳ್ಳಿ, ಹಳೆಬೀಡು, ಜಾವಗಲ್ ಹೋಬಳಿಗಳ ಒಟ್ಟು 40 ಕೆರೆಗಳಿಗೆ ಎತ್ತಿನಹೊಳೆ ಯೋಜನೆಯಿಂದ ನೀರನ್ನು ಹರಿಸಲಾಗುತ್ತಿದೆ. ಇದು ಈ ಭಾಗದ ಜನರ ಹೋರಾಟದ ಫಲ ಎಂದರು.

(-4ನೇ ಪುಟಕ್ಕೆ)

ಪತ್ರಿಕೆಯ ವರದಿಗೆ ಅಭೂತಪೂರ್ವ ಪ್ರತಿಕ್ರಿಯೆ

‘ಶಾಪಗ್ರಸ್ಥ ಹಾಸನ ತಾಲ್ಲೂಕು’ ವರದಿಗೆ ಅಭೂತಪೂರ್ವ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ಬೆಳಿಗ್ಗೆಯಿಂದಲೇ ಕಛೇರಿಗೆ ಹತ್ತಾರು ಕರೆಗಳು ಬಂದವು. ಹಲವರು ಪತ್ರಿಕಾ ಕಾರ್ಯಾಲಯಕ್ಕೂ ಬಂದು ಪ್ರತಿಕ್ರಿಯೆಗಳನ್ನು ಹೇಳಿದ್ದಾರೆ. ಅವುಗಳು ಹೀಗಿವೆ.

ಗಟ್ಟಿ ನಾಯಕತ್ವ ಕೊರತೆ ನೀಗಿಸಲೇಬೇಕು

ಜನತಾಮಾಧ್ಯಮ ಪತ್ರಿಕೆ ನಿಜವಾಗಿಯೂ ಚರ್ಚೆಯನ್ನು ಹುಟ್ಟು ಹಾಕಿದೆ. ನಮ್ಮ ಹಾಸನ ತಾಲ್ಲೂಕು ಶಾಪಗ್ರಸ್ಥ ಎಂದು ವಿವರಿಸಬೇಕಿಲ್ಲ. ಪತ್ರಿಕೆಯಲ್ಲಿ ಹೇಳಿರುವಂತೆ, ತಾಲ್ಲೂಕಿಗೆ ಸಮರ್ಥ ನಾಯಕರು ಈವರೆವಿಗೂ ಬರಲೇ ಇಲ್ಲ.

ಹಾಸನ ಸುತ್ತಮುತ್ತ ಇರುವ ಹಳ್ಳಿಗಳ ರಸ್ತೆ ವಿಪರೀತ ಹದಗೆಟ್ಟು ಹೋಗಿದೆ. ಹೇಮಾವತಿ ಜಲಾಶಯದಿಂದ ಕುಡಿಯುವ ನೀರು ಪೂರೈಸುವ ಯೋಜನೆ ಪೂರ್ಣವಾಗಿಲ್ಲ. ಇಲ್ಲಿಯ ರೈತರ ಕಷ್ಟವಂತೂ ಹೇಳತೀರದಾಗಿದೆ. ಹಾಸನ ತಾಲ್ಲೂಕಿಗೆ ಕಟ್ಟಾಯ, ಶಾಂತಿಗ್ರಾಮ, ಕಂದಲಿ, ಬೂವನಹಳ್ಳಿ ಹೋಬಳಿಗಳು ಸೇರ್ಪಡೆಯಾಗುತ್ತವೆ. ಹಾಸನ ವಿಧಾನಸಭಾ ಕ್ಷೇತ್ರ ವ್ಯಾಪ್ತಿ ಬೇರೆ ಇರಬಹುದು. ಆದರೆ ತಾಲ್ಲೂಕಿನ ಅಭಿವೃದ್ಧಿಗೆ ಒಳ್ಳೆಯ ನಾಯಕರು ರೂಪುಗೊಳ್ಳಲಿಲ್ಲ. ಬಹುಶಃ ಹಾಸನವನ್ನು ಬೇರೆಯವರಿಗೆ ಒತ್ತೆ ಇಡಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು, ನಮ್ಮ ಜಿಲ್ಲೆಯ ಸಂಸದ ಹೆಚ್.ಡಿ.ದೇವೇಗೌಡರು ಹಾಗೂ ಹಾಸನ ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಎಸ್.ಪ್ರಕಾಶ್ ಅವರು ಜವಾಬ್ದಾರಿಯಿಂದ ಕೆಲಸ ಮಾಡಲಿಲ್ಲ. ರೈಲ್ವೆ ಮೇಲ್ಸೇತುವೆ ಇನ್ನೂ ನೆನೆಗುದಿಗೆ ಬಿದ್ದಿದೆ. ನೀರಾವರಿ ಸೌಲಭ್ಯವಂತೂ ಇಲ್ಲವೇ ಇಲ್ಲ.

ನಮ್ಮ ತಾಲ್ಲೂಕನ್ನು ಮಲತಾಯಿ ಧೋರಣೆಯಿಂದ ನೋಡಿದ ಫಲವಾಗಿಯೇ ತಾಲ್ಲೂಕು ಹಿಂದುಳಿದಿದೆ. ಮುಂದೆ ಇದನ್ನು ಸಹಿಸಲಾಗುವುದಿಲ್ಲ. ಗಟ್ಟಿ ನಾಯಕತ್ವ ಕೊರತೆಯನ್ನು ನೀಗಿಸಲೇಬೇಕು.

-ಬಿ.ಕೆ.ರಂಗಸ್ವಾಮಿ,
ಕಾಂಗ್ರೆಸ್ ಮುಖಂಡ.

ನೀರಾವರಿ ಸೌಲಭ್ಯ ಕಲ್ಪಿಸಲೇ ಇಲ್ಲ



ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಸೌಲಭ್ಯವೇ ಇಲ್ಲ. ನೀರಾವರಿ ಸೌಲಭ್ಯ ಕಲ್ಪಿಸಬೇಕಾದ ಜವಾಬ್ದಾರಿ ಶಾಸಕರದ್ದು. ಆದರೆ ಆ ಕೆಲಸ ಆಗಲೇ ಇಲ್ಲ. ಕೆರೆಗಳನ್ನು ತುಂಬಿಸುವಂತೆ ಈಗ ಹೋರಾಟ ನಡೆಯುತ್ತಿದೆ. ಆದರೆ ಕೆರೆ ನೀರು ತುಂಬಿಸುವ ಕಡೆಯೂ ಆಲೋಚಿಸಲಿಲ್ಲ. ಆಲೂಗೆಡ್ಡೆ ರೈತರು ಸಂಕಷ್ಟದಲ್ಲಿದ್ದಾರೆ. ಅವರಿಗೆ ನೆರವು ನೀಡಿಲ್ಲ.

ರೈಲ್ವೆ ಮೇಲ್ಸೇತುವೆಗೆ ಸಂಬಂಧಿಸಿದಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ಎಸ್.ಯಡಿಯೂರಪ್ಪ ಅವರು ಕೇಂದ್ರದ ಗಮನ ಸೆಳೆದಿದ್ದಾರೆ. ಆದರೆ ರಾಜ್ಯ ಸರ್ಕಾರ ಗಮನ ಹರಿಸಿಲ್ಲ. ಶಾಸಕ ಪ್ರಕಾಶ್ ಅವರು ಈ ವಿಚಾರದಲ್ಲಿ ಒತ್ತಡವನ್ನೂ ಹೇರಲಿಲ್ಲ.

-ಅಗಿಲೆ ಯೋಗೀಶ್, ಬಿ.ಜೆ.ಪಿ. ಗ್ರಾಮಾಂತರ ಮಂಡಲ ಅಧ್ಯಕ್ಷ

ಉತ್ತಮ ನಾಯಕ ಈಗ ಅಗತ್ಯ



ಜನತಾಮಾಧ್ಯಮ ಪತ್ರಿಕೆ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ನಡೆಸುತ್ತಿದೆ. ಕಳೆದ 40 ವರ್ಷದಿಂದಲೂ ಪತ್ರಿಕೆ ಈ ಕೆಲಸ ಕೈಗೊಂಡಿದೆ. ಹಾಸನ ತಾಲ್ಲೂಕಿನಲ್ಲಿ ನಾಯಕತ್ವದ ಕೊರತೆ ಕುರಿತು ಚರ್ಚೆ ನಡೆಸಿ ಜಾಗೃತಿ ಮೂಡಿಸಿದೆ. ಇದು ಈ ಸಂದರ್ಭದಲ್ಲಿ ಅಗತ್ಯ ಹಾಗೂ ಅನಿವಾರ್ಯವೂ ಇತ್ತು.

ರಾಜಕೀಯ ಪಕ್ಷಗಳು ಕಂಪೆನಿಗಳಾಗಿವೆ. ಆ ಬಗೆಗೆ ಮಾತನಾಡದಿರುವುದೇ ವಾಸಿ. ಹಾಸನ ತಾಲ್ಲೂಕಿನ ಸಮಗ್ರ ಅಭಿವೃದ್ಧಿ ಬಗ್ಗೆ ದೂರದೃಷ್ಟಿಯುಳ್ಳ ನಾಯಕರು ಇಲ್ಲವೇ ಇಲ್ಲ. ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದೆ. ಈಗ ನಮಗೆಲ್ಲಾ ಉತ್ತಮವಾದ ನಾಯಕರು ಬೇಕು. *-ಮಂಜುನಾಥ ಮೋರೆ, ಸಮಾಜ ಸೇವಕ.*

> **“ಪತ್ರಿಕೆಯ ಕಾಳಜಿಯನ್ನು ಮೆಚ್ಚಲೇಬೇಕು. ಹಾಸನ ತಾಲ್ಲೂಕು ಶಾಪಗ್ರಸ್ಥವೇ ಆಗಿದೆ. ಹುಣಸಿನಕೆರೆ, ಚನ್ನಪಟ್ಟಣ ಕೆರೆ, ಸತ್ಯಮಂಗಲ ಕೆರೆಗಳ ಪುನಶ್ಚೇತನಕ್ಕೆ ಒತ್ತಾಯಿಸಿ ಚಳವಳಿಗಳೇ ನಡೆದಿವೆ. ಆದರೆ ಯಾವ ರಾಜಕೀಯ ಪಕ್ಷಗಳೂ, ಮುಖಂಡರೂ ಇತ್ತ ಗಮನ ಹರಿಸಲಿಲ್ಲ. ನಾಯಕತ್ವದ ಕೊರತೆ ಇರುವುದು ಎದ್ದು ಕಾಣುತ್ತಿದೆ.**
>
> ***-ಪುಟ್ಟರಾಜೇಗೌಡ,***
> ***ಹಸಿರು ಭೂಮಿ ಪ್ರತಿಷ್ಠಾನ.***

ಪ್ರಶಂಸಿಸಲೇಬೇಕು

ಜನತಾಮಾಧ್ಯಮ ಪತ್ರಿಕೆಯು ಮೊದಲಿನಿಂದಲೂ ಇಂತಹ ವರದಿಗಳನ್ನು ಮಾಡಿ ಜನರನ್ನು ಮುಟ್ಟುತ್ತಿದೆ. ಇತ್ತೀಚೆಗಂತೂ ಪತ್ರಿಕಾ ವರದಿಗಳು ಗಮನ ಸೆಳೆಯುತ್ತಿವೆ. ಕೆರೆ ಪುನಶ್ಚೇತನ, ಅಭಿವೃದ್ಧಿ ವಿಚಾರದಲ್ಲಿ ಯಾವಾಗಲೂ ಚರ್ಚೆ ನಡೆಸುತ್ತಿದೆ. ಪತ್ರಿಕೆಯ ಮುಖ್ಯ ವರದಿಗಾರರ ವರದಿಯನ್ನು ಪ್ರಶಂಸಿಸಲೇಬೇಕು. *-ತಿರುಪತಿಹಳ್ಳಿ ಶಿವಶಂಕರಪ್ಪ,*
ಸಾಂಸ್ಕೃತಿಕ ವೇದಿಕೆ.

ಜನರೇ ತೀರ್ಮಾನಿಸಲಿ



ನಗರದ ನಾಲ್ಕು ಭಾಗಗಳಲ್ಲಿರುವ ಕೆರೆಗಳಿಗೆ ಕಲುಷಿತ ನೀರು ಸೇರ್ಪಡೆಯಾಗುತ್ತಿದೆ. ಕಲುಷಿತ ನೀರಿನಿಂದ ಮುಕ್ತಿಗೊಳಿಸಬೇಕಾದ ಅಗತ್ಯವಿದೆ. ವೈಜ್ಞಾನಿಕ ವಿಧಾನದಿಂದ ಕಲುಷಿತ ನೀರನ್ನು ಬೇರ್ಪಡಿಸಿ ಇತರೆ ಉದ್ದೇಶಕ್ಕೆ ಬಳಸಿಕೊಂಡು ಕುಡಿಯುವ ನೀರಿಗೆ ಆದ್ಯತೆ ಕೊಡಬೇಕಾಗಿದೆ. ಈ ಬಗ್ಗೆ ಚರ್ಚೆಗಳು ನಡೆಯಲೇಬೇಕು. ನಾಯಕತ್ವದ ಕೊರತೆ ಇರುವುದು ನಿಜ. ಮುಂಬರುವ ದಿನಗಳಲ್ಲಿ ಜನರು ಉತ್ತಮ ನಾಯಕತ್ವ ನಿರೀಕ್ಷೆಯಲ್ಲಿದ್ದಾರೆ. ಚುನಾವಣೆ ಎದುರಾಗಲಿದೆ. ಜನರ ತೀರ್ಪಿಗೆ ಬಿಡೋಣ.

-ಪ್ರೀತಂ ಗೌಡ, ಬಿಜೆಪಿ ಮುಖಂಡ

ಇಚ್ಛಾಶಕ್ತಿ ಕೊರತೆ ಹಿನ್ನಡೆಗೆ ಕಾರಣ



ಕಳೆದ 25 ವರ್ಷಗಳಿಂದಲೂ ಹಾಸನ ವಿಧಾನಸಭಾ ಕ್ಷೇತ್ರ ಅಭಿವೃದ್ಧಿಯಾಗಿಲ್ಲ. ನಿರೀಕ್ಷಿತ ಮಟ್ಟದಲ್ಲಿ ಕಾಮಗಾರಿಯೂ ಸಾಗಿಲ್ಲ. ರೈತ ಮುಖಂಡರು, ಪ್ರಗತಿಪರ ಚಿಂತಕರು ಪರಿಸರ, ಕೆರೆ, ಇತ್ಯಾದಿಯ ಬಗ್ಗೆ ಹೋರಾಟ ಮುಂದುವರಿಸಿದ್ದಾರೆ. ಕುಡಿಯುವ ನೀರಿನ ಪರಿಸ್ಥಿತಿ ಹೇಳತೀರದು.

ನಮ್ಮ ಜನಪ್ರತಿನಿಧಿಗಳಿಗೆ ಇಚ್ಛಾಶಕ್ತಿ ಕೊರತೆ ಇರುವಂತೆ ಕಾಣುತ್ತಿದೆ. ಪತ್ರಿಕೆಯು ಈ ಸಂದರ್ಭದಲ್ಲಿ ನಾಯಕತ್ವದ ಕೊರತೆ ಕುರಿತು ಚರ್ಚೆ ಹುಟ್ಟು ಹಾಕಿರುವುದು ಸ್ವಾಗತಾರ್ಹ ಬೆಳವಣಿಗೆ. ಆರೋಗ್ಯಕರವಾಗಿ ಚರ್ಚೆ ನಡೆಯಲಿ.

-ರವಿ ನಾಕಲಗೂಡು, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ.

ಆಕಸ್ಮಿಕ ಬೆಂಕಿ : ರೈತರ ಹುಲ್ಲಿನ ಬಣವೆ ಭಸ್ಮ

ಹಳೇಬೀಡು: ಆಕಸ್ಮಿಕ ಬೆಂಕಿ ಅನಾಹುತದಿಂದ ಮೂವರು ರೈತರ ಹುಲ್ಲಿನ ಬಣವೆಗಳು ಬೆಂಕಿಯಲ್ಲಿ ಬೆಂದು ಬೂದಿಯಾಗಿರುವ ಘಟನೆ ಮಂಗಳವಾರ ಮಧ್ಯಾಹ್ನ ರಾಜನಶಿರಿಯೂರು ಗ್ರಾಮದಲ್ಲಿ ನಡೆದಿದೆ.

ಮಳೆ ಕೊರತೆಯ ನಡುವೆ ಹಿಂಗಾರಿನಲ್ಲಿ ರಾಗಿ, ಜೋಳ, ಹಾಗೂ ಹುರುಳಿ ಬೆಳೆದು ಜಾನುವಾರುಗಳಿಗಾಗಿ ರೈತರು ಮೇವು ಸಂಗ್ರಹಿಸಿದ್ದರು. ಫಸಲು ಕಡಿಮೆ ಬಂದರೂ ಮೇವು ಕೈಗೆ ಬಂದಿದೆ ಎಂದು ರೈತರು ಹರ್ಷಿತರಾಗಿದ್ದರು. ಈಗ ಕಷ್ಟ ಮಾಡಿ ಸಂಪಾದಿಸಿದ ಮೇವು ಬೆಂಕಿಗೆ ಆಹುತಿಯಾಗಿದೆ ಎಂದು ಅವರು ಚಿಂತಾಕ್ರಾಂತರಾಗಿದ್ದಾರೆ.

ಕಳೆದ ವರ್ಷ ಮೇವಿಲ್ಲದೆ ಪಡಬಾರದ ಕಷ್ಟ ಅನುಭವಿಸಿದ್ದೆವು. ಈ ವರ್ಷ ಮೇವು ದೊರಕಿದೆ ಎಂದುಕೊಂಡಿದ್ದೆವು. ಆದರೆ ಈ ವರ್ಷ ಬೆಳೆ ಬಂದರೂ ಮೇವು ಇಲ್ಲದಂತಾಯಿತು ಎಂದು ಮೂವರು ರೈತರು ಅಳಲು ತೋಡಿಕೊಂಡರು.

ಸಣ್ಣನಿಂಗೇಗೌಡ ಅವರಿಗೆ ಸೇರಿದ 3 ಟ್ರಾಕ್ಟರ್ ರಾಗಿ ಹುಲ್ಲು, 2 ಟ್ರಾಕ್ಟರ್ ಜೋಳದ ಸೆಬ್ಬೆ, 1 ಟ್ರಾಕ್ಟರ್ ಹುರುಳಿ ಸೊಪ್ಪು ಸುಟ್ಟು ಹೋಗಿದೆ. ಗಂಗಾಧರ ಶೆಟ್ಟಿಗೆ ಸೇರಿದ 6 ಟ್ರಾಕ್ಟರ್ ರಾಗಿ ಹುಲ್ಲು, 4 ಟ್ರಾಕ್ಟರ್ ಜೋಳದ ಸೆಬ್ಬೆ, ದೇವರಣ್ಣ ಅವರಿಗೆ ಸೇರಿದ 6 ಟ್ರಾಕ್ಟರ್ ರಾಗಿ ಹುಲ್ಲು ಹಾಗೂ 4 ಟ್ರಾಕ್ಟರ್ ಜೋಳದ ಸೆಬ್ಬೆ ಬೆಂಕಿಯಲ್ಲಿ ಬೂದಿಯಾಗಿದೆ ಎಂದು ರೈತರು ತಿಳಿಸಿದ್ದಾರೆ.

ಗ್ರಾಮಸ್ಥರು ಬಿಂದಿಗೆಯಲ್ಲಿ ನೀರು ಹೊತ್ತು ತಂದು ಬೆಂಕಿ ನಂದಿಸಲು ಪ್ರಯತ್ನಿಸಿದರೂ ಮೇವು ಉಳಿಸಲು ಸಾಧ್ಯವಾಗಲಿಲ್ಲ. ಬೇಲೂರಿನಿಂದ ಅಗ್ನಿಶಾಮಕ ವಾಹನ ಸ್ಥಳಕ್ಕೆ ಆಗಮಿಸುವ ವೇಳೆಗೆ ಬೆಂಕಿಯಲ್ಲಿ ಮೇವು ಸುಟ್ಟುಹೋಗಿತ್ತು.

ಡಿ.ಸಿ. ವರ್ಗಾವಣೆ ಒತ್ತಡ : ತೀವ್ರ ವಿರೋಧ

DIST WORKING JOURNALIST ASSOCIATION

ಹಾಸನ : ಯಾವುದೇ ಆರೋಪವಿಲ್ಲದೆ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ ಕೆಲವರು ಅವರ ವರ್ಗಾವಣೆಗೆ ಒತ್ತಾಯಿಸಿರುವುದು ಹಾಸ್ಯಾಸ್ಪದ ಎಂದು ದಲಿತ ಮುಖಂಡ ಶಿವಕುಮಾರ್ ತಿರುಮನಹಳ್ಳಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಜಿಲ್ಲೆಗೆ ಜಿಲ್ಲಾಧಿಕಾರಿಯಾಗಿ ಬಂದ ಮೇಲೆ ರೋಹಿಣಿ ಸಿಂಧೂರಿಯವರು ಜನಪರ ಕಾರ್ಯಗಳನ್ನು ಕೈಗೊಂಡಿದ್ದಾರೆ. ಬೇಲೂರು ತಾಲ್ಲೂಕಿನಲ್ಲಿನ ಜೂನಿಯರ್ ಕಾಲೇಜು ಆಟದ ಮೈದಾನವನ್ನು ಬೇರೆಯವರಿಗೆ ಅಕ್ರಮವಾಗಿ ಕಂದಾಯ ಇಲಾಖೆ ಅಧಿಕಾರಿಗಳು ನಕಲಿ ಖಾತೆ ಮಾಡಿಕೊಟ್ಟಿದ್ದರ ಬಗ್ಗೆ ತಕ್ಷಣ ಸ್ಪಂದಿಸಿದ ಜಿಲ್ಲಾಧಿಕಾರಿಗಳು, ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿ ಅಕ್ರಮಕ್ಕೆ ಕಾರಣಕರ್ತರಾದ ಮೂವರು ಅಧಿಕಾರಿಗಳನ್ನು ಅಮಾನತ್ತುಗೊಳಿಸಿದ್ದು ಶ್ಲಾಘನೀಯ ಎಂದರು.

ಜಿಲ್ಲೆಯ ಅರ್ಹ ಬಡ ಕುಟುಂಬಗಳಿಗೆ ಪಡಿತರ ಚೀಟಿ ವಿತರಣೆಗೆ ಕ್ರಮ ವಹಿಸಿದ ಜಿಲ್ಲಾಧಿಕಾರಿಗಳು, ಬೆಳೆ ಸಮೀಕ್ಷೆಯಲ್ಲಿ ಹಾಸನವನ್ನು ರಾಜ್ಯದಲ್ಲಿಯೇ 2ನೇ ಸ್ಥಾನಕ್ಕೆ ತಂದಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜಮೀನು ಮಂಜೂರಾತಿಗಾಗಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಇದು ಅವರ ಜನಪರ ಕಾರ್ಯಗಳಿಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕದ ಉದ್ದೇಶಕ್ಕಾಗಿ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಡಿ.ಸಿ. ಕೈಗೊಂಡಿದ್ದಾರೆ. ಅಲ್ಲದೆ ಅರಸೀಕೆರೆಯಲ್ಲಿ ಮೇವು ಶೇಖರಣಾ ಕೇಂದ್ರ ತೆರೆದು ಪ್ರತಿ ತಿಂಗಳು ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸುತ್ತಿದ್ದಾರೆ ಎಂದು ವಿವರಿಸಿದರು.

ಒಟ್ಟಿನಲ್ಲಿ ಭ್ರಷ್ಟ ಅಧಿಕಾರಿಗಳು ಮತ್ತು ಭ್ರಷ್ಟ ರಾಜಕಾರಣಿಗಳಿಗೆ ಸಿಂಹಸ್ವಪ್ನವಾಗಿರುವ ಮಹಿಳಾ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರನ್ನು ವರ್ಗಾವಣೆ ಮಾಡದಂತೆ ಅವರು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ದಲಿತ ಮುಖಂಡ ಎಸ್.ಪಾಪಣ್ಣ, ಡಿಎಸ್‌ಎಸ್ ಮುಖಂಡ ತೀರ್ಥೇಶ್, ಸತೀಶ್, ಹರೀಶ್, ತಾಲ್ಲೂಕು ಮುಖಂಡ ಚಂದ್ರಶೇಖರ್ ಇತರರು ಇದ್ದರು.